ಮೇಲ್ಕಂಡ ೮ ಖಾಸಗೀ ಕಾಲೇಜುಗಳಿಗೂ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಹಾಗೂ ೧೯೮೩ ರಿಂದೀಚೆಗೆ ಸರಕಾರ ಖಾಸಗಿ ಪ್ರೌಢಶಾಲೆಗಳಿಗೆ ಕಟ್ಟಡದ ಬಾಬ್ತು ಅನುದಾನ ನೀಡಿರುವುದರಿಂದಾಗಿ ಖಾಸಗಿ ಶಾಲೆಗಳ ಆಡಳಿತ ವರ್ಗದವರಿಗ ತುಂಬಾ ಅನಾನುಕೂಲವಾಗಿದ್ದು ಸದರಿ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಮಾನ್ಯ ವಿದ್ಯಾ ಮಂತ್ರಿಗಳಿಗೆ ಹೇಳಿ ಉತ್ತರವನ್ನು ತರಿಸಿಕೊಡುತ್ತೇನೆ.

೮ ಬೊಂಬಾಯಿಯ ನಾಗಪಾಲ್ ಪೋಲೀಸ್ ಸ್ಟೇಷನ್ನಿನವರು ಕರ್ನಾಟಕದ ಕೃಷ್ಣನ್ ನಾಯರ್ ಎಂಬುವನನ್ನು ಖೋಟಾ ನೋಟ್ ಪ್ರಕರಣದಲ್ಲಿ ಬಂಧಿಸಿರುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಬೊಂಬಾಯಿನ ಮಧ್ಯ ದಕ್ಷಿಣದಲ್ಲಿ ರುವ ನಾಗಪಾಲ್ ಪೋಲೀಸ್ ಠಾಣೆಯವರು ಮಾರ್ಚಿ ೩ ರಂದು ಖೋಟಾ ನೋಟುಗಳನ್ನು ವಿತರಣೆ ಮಾಡುತ್ತಿದ್ದ ತಂಡವೊಂದನ್ನು ಹಿಡಿದಿದ್ದು ಅದರಲ್ಲಿ ಒಬ್ಬರು ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಕಾರ್ಕಳದ ಕೃಷ್ಣನ್ ನಾಯರ್ ಎಂದು ತಿಳಿದು ಬಂದಿದೆ ಈತನೇ ಈ ತಂಡದ ನಾಯಕನೆಂದೂ ಪೋಲೀಸರು ತಿಳಿಸಿದ್ದಾರೆ. ಪೋಲೀಸರು ಕರ್ನಾಟಕಕ್ಕೆ ಬಂದು ನಾಯರ್ ವಿಷಯದಲ್ಲಿ ವಿಚಾರಣೆ ನಡೆಸಿ ಸದರಿ ನಾಯರ್ ಕೆಲವು ತಪ್ಪು ಮಾಡಿದ್ದರಿಂದಾಗಿ ಕೆಲಸ ಕಳೆದುಕೊಂಡ ಸರ್ಕಾರಿ ಮುದ್ರಣಾಲಯದ ಮಾಜಿ ನೌಕರನೆಂದೂ ಬೊಂಬಾಯಿಯ ಪೋಲೀಸರು ಸದರಿ ನಾಯರ್ ಅನ್ನು ಬಂಧಿಸಿದಾಗ ಆತ ಕರ್ನಾಟಕದಲ್ಲಿ ಅಪರಾಧವೆಸಗಿ ಪೋಲೀಸರು ಬಂಧಿಸಿದ್ದು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ನೆಂದೂ ತಿಳಿದು ಬಂದಿದೆ. ಈ ಬಗ್ಗೆ ಸರ್ಕಾರ ಕೂಡಲೇ ಆತನ ಬಗ್ಗೆ ಕೂಲಂಕುಷ ವಿಚಾರಣೆ ನಡೆಸಿ ನವ್ಯ ಪೊಲೀಸರು ಆತನನ್ನು ಯಾವ ಸಂದರ್ಭದಲ್ಲಿ ಬಂಧಿಸಿದ್ದರು ಹಾಗೂ ಜಾಮೀನಿನ ಮೇಲೆ ಯಾವ ಷರತ್ತಿನ ಮೇಲೆ ಬಿಡುಗಡೆ ಮಾಡಿದ್ದರು ಎಂಬುದರ ಬಗ್ಗೆ ಸಭೆಗೆ ಹೇಳಿಕೆ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನನಗೆ ಈವರೆಗೆ ಸಂಬಂಧಪಟ್ಟ ವಿವರಗಳು ತಲಪಿಲ್ಲ.

೯ ಸುಳ್ಯದ ಮುನ್ಸೀಫ್ ಮ್ಯಾಜಿಸ್ಟ್ರೇಟರ ಖಾಲಿ ಹುದ್ದೆಯನ್ನು ತುಂಬುವ ಕುರಿತು

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲ್ಲೂಕಿನ ಮುನ್ಸೀಫ್ ಮ್ಯಾಜಿಸ್ಟ್ರೇಟರ ನ್ಯಾಯಾಲಯದಲ್ಲಿ ಕಳೆದ ಒಂದು ವರ್ಷದ ಲಾಗಾಯ್ತು ಮುನ್ಸೀಫ್ ಮ್ಯಾಜಿಸ್ಟ್ರೇಟರ ಹುದ್ದೆ ಖಾಲಿ ಇರುತ್ತದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದರಿಂದಾಗಿ ಸುಳ್ಯದ ನಾಗರೀಕರಿಗೆ ಕೋರ್ಟ್ ಕಛೇರಿ ಕೆಲಸಗಳಿಗೆ ತುಂಬಾ ತೊಂದರೆಯಾಗಿರುತ್ತದೆ. ಆದುದರಿಂದ ಸದ್ರಿ ಸುಳ್ಯಕ್ಕೆ ಮುನ್ಸೀಫ್ ಮ್ಯಾಜಿಸ್ಟ್ರೇಟರ ಹುದ್ದೆಯನ್ನು ಕೂಡಲೇ ಭರ್ತಿ ಮಾಡುವಂತೆ ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಇದು ಹೈಕೋರ್ಟ್ ನವರು ಮಾಡಬೇಕಾದಂಥ ಕೆಲಸ. ಈಗ ನಡೆದಿರತಕ್ಕಂಥ ಕಾರ್ಯಕ್ರಮಗಳನ್ನು ನೋಡಿದರೆ ಅಲ್ಲಿಗೆ ಬೇಗನೆ ಮುನ್ಸೀಫ್‌ರನ್ನು ಹಾಕತಕ್ಕಂಥ ಸನ್ನಿವೇಶ ಇದೆ. ಅದು ಇನ್ನು ೨-೩ ತಿಂಗಳಲ್ಲಿ ಆಗಬಹುದು ಎಂದು ನನಗೆ ಅನ್ನಿಸುತ್ತದೆ.

೧೦ ಕೊಡಗು ಜಿಲ್ಲೆಯಲ್ಲಿ ಸೀಮೆ ಎಣ್ಣೆ ಕೊರತೆಯಿಂದ ಬಡಜನರಿಗೆ ತೊಂದರೆಯಾಗಿರುವುದು.

ಶ್ರೀ ಡಿ.ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯಾದ್ಯಂತ ಒಂದು ತಿಂಗಳಿಂದ ಸೀಮೆ ಎಣ್ಣೆಯ ಅಭಾವದಿಂದಾಗಿ ಬಡ ಜನರಿಗೆ ಬಹಳ ತೊಂದರೆಯಾಗಿದ್ದು, ಇದಂವರೆಗೂ ಜಿಲ್ಲಾಧಿಕಾರಿಗಳಾಗಲಿ ಅಥವಾ ಪುಡ್ ಅಸಿಸ್ಟೆಂಟ್ ಆವರಾಗಲಿ ಜನರ ತೊಂದರೆ ನಿವಾರಣೆ ಮಾಡುವ ಬಗ್ಗೆ ಯಾವ

ಕ್ರಮವನ್ನೂ ಕೈಕೊಳ್ಳದಿರುವುದರಿಂದ ಜನರು ಈ ಬಗ್ಗೆ ಪ್ರತಿಭಟಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದು ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮುನ್ನ ಸೀಮೆಯೆಣ್ಣೆ ಸರಬರಾಜು ಮಾಡಿ ಅದರ ಅಭಾವವನ್ನು ಪರಿಹಾರ ಮಾಡುವ ಬಗ್ಗೆ ಸರ್ಕಾರದವರು ಕೂಡಲೇ ಕ್ರಮ ಕೈಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಸರಾಸರಿ ೩೬,೦೦೦ ಕಿ. ಲೀ. ಗಳಷ್ಟು ಸೀಮೆ ಎಣ್ಣೆಯನ್ನು ಪ್ರತಿ ಮಾಹೆಗೆ ಬಿಡುಗಡೆ ಮಾಡುತ್ತಿದ್ದು, ಜಿಲ್ಲಾವಾರು ಬೇಡಿಕೆಯ ಮೇರೆಗೆ ಈ ಸೀಮೆ ಎಣ್ಣೆಯ ಕೋಟಾವನ್ನು ಅವಶ್ಯಕತೆ ಮೇರೆಗೆ ಪ್ರತಿ ಜಿಲ್ಲೆಗೆ ರಾಜ್ಯ ಮಟ್ಟದ ಸಂಯೋಜನಾಧಿಕಾರಿ ಐ ಒ. ಸಿ ಹಾಗೂ ಇತರೆ ಆಯಿಲ್ ಕಂಪೆನಿಗಳ ಅಧಿಕಾರಿಗಳ ಜೊತೆ ಪ್ರತಿ ತಿಂಗಳು ಚರ್ಚೆ ನಡೆಸಿ, ಬಿಡುಗಡೆ ಮಾಡುತ್ತಿರುತ್ತದೆ. ಕೊಡಗು ಜಿಲ್ಲೆಗೆ ಮಾರ್ಚಿ ೧೯೮೬ ರಿಂದ ಈವರೆಗೆ ಬಿಡುಗಡೆ ಮಾಡಿರುವ ಸೀಮೆ ಎಣ್ಣೆ ಪ್ರಮಾಣವು ಈ ಕೆಳಕಂಡಂತೆ ಇರುತ್ತದೆ.

					(ಕಿ. ಲೀಟರುಗಳಲ್ಲಿ)		
ಮಾರ್ಚಿ	೧೯೮೬	...	೫೫೦				
ಏಪ್ರಿಲ್	,,	...	೫೦೦	ಆಕ್ಟೋಬರ್	೧೯೮೬	...	೫೫೦
ಮೇ	,,	...	೫೧೦	ನವೆಂಬರ್	,,	...	೬೫೦
ಜೂನ್	,,	...	೬೫೦	ಡಿಸೆಂಬರ್	,,	...	೬೫೦
ಜುಲೈ	,,	...	೬೦೦	ಜನವರಿ	೧೯೮೭	...	೬೫೦
ಆಗಸ್ಟ್	,,	...	೫೫೦	ಫೆಬ್ರುವರಿ	,,	...	೬೫೦
ಸೆಪ್ಟೆಂಬರ್	,,	...	೫೫೦	ಮಾರ್ಚಿ	,,	...	೫೭೫

(ಒಂದು ಕಿಲೋ ಲೀಟರ್ ... ೧೦೦೦ ಲೀಟರ್‌ಗಳು)

ಇದರಿಂದ ಕೊಡಗು ಜಿಲ್ಲೆಗೆ ಸಂಪೂರ್ಣ ವರ್ಷಗಳಿಂದ ಸೀಮೆಎಣ್ಣೆಯನ್ನು ಸಾಕಷ್ಟು ಬಿಡಂಗಡೆ ಮಾಡುತ್ತಿದ್ದು, ಕೊಡಗು ಜಿಲ್ಲೆಯಲ್ಲಾಗಲೀ ಅಥವಾ ಇನ್ಯಾವುದೇ ಜಿಲ್ಲೆಯಲ್ಲಾಗಲಿ ಸೀಮೆಎಣ್ಣೆ ಅಭಾವ ಇರುವ ಬಗ್ಗೆ ಜಿಲ್ಲಾಧಿಕಾರಿಗಳಿಂದಾಗಲಿ ಯಾವ ರೀತಿಯ ದೂರುಗಳೂ ಬಂದಿರುವುದಿಲ್ಲ.

ಪ್ರತಿ ತಿಂಗಳು ಎಲ್ಲಾ ಜಿಲ್ಲಾಧಿಕಾರಿಗಳ ಸಹಾಯಕರ ಸಭೆಯನ್ನು ನಡೆಸಿ, ಆ ಸಭೆಯಲ್ಲಿ ಆಯಾಯಾ ಜಿಲ್ಲೆಗೆ ಬಿಡುಗಡೆ ಮಾಡಿರುವ ಸೀಮೆ ಎಣ್ಣೆ ಕೋಟಾವನ್ನು ಪೂರ್ಣ ಎತ್ತುವಳಿ ಮಾಡಿ, ಹಂಚಿಕೆಯಲ್ಲಿ ಯಾವ ರೀತಿಯ ಲೋಪದೋಷಗಳು ಇಲ್ಲದಂತೆ ಮಾಡಲು ತಾಕೀತು ಮಾಡಲಾಗಿದೆ.

ಈ ವಿಷಯದಲ್ಲಿ ಕೊಡಗು ಜಿಲ್ಲಾಧಿಕಾರಿಗಳು ಮತ್ತು ಪುಡ್ ಅಸಿಸ್ಟೆಂಟ್‌ರವರಿಗೆ ಸೂಕ್ತ ನಿರ್ದೇಶನವನ್ನು ನೀಡಲಾಗಿದೆ ಹಾಗೂ ಆ ಜಿಲ್ಲೆಯಲ್ಲಿ ಸೀಮೆ ಎಣ್ಣೆಯ ಅಭಾವಕ್ಕೆ ಯಾವ ರೀತಿಯ ಆಸ್ಪದವನ್ನೂ ಕೊಡದೆ ಇರಲು ಸಂಬಂಧಿಸಿದ ಆಯಿಲ್ ಕಂಪೆನಿಗಳವರಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡಲಾಗಿದೆ.

೧೧) ಕ. ರಾ. ರ. ಸಾರಿಗೆ ಸಂಸ್ಥೆಯವರು ಹಳ್ಳಿಗಳಲ್ಲಿ ಬಸ್‌ತಾಣಗಳನ್ನು ಒದಗಿಸುವುದು.

ಶ್ರೀ ಬಿ.ಎ. ಉಪ್ಪಿನ.—ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಹಳ್ಳಿಹಳ್ಳಿಗಳಿಗೆ ಸಾರಿಗೆ ಸೌಲಭ್ಯವನ್ನು ಹೆಚ್ಚಿನ ರೀತಿಯಲ್ಲಿ ಒದಗಿಸುತ್ತಿದ್ದಾರೆ. ಧನ್ಯವಾದಗಳು. ಆದರೆ ಹಳ್ಳಿಗಳಲ್ಲಿ ಒಂದೂ ಬಸ್ ಶೆಲ್ಟರ್‌ಗಳು ಇಲ್ಲದೆ ಇರುವುದು ತುಂಬಾ ಶೋಚನೀಯ ಪ್ರಯಾಣಿಕರು ಮಳೆ ಬಿಸಿಲು ಎನ್ನದೆ ಬಸ್‌ಗಾಗಿ ದಾರಿಯಲ್ಲಿ ಕಾಯುತ್ತಿರಬೇಕಾಗುತ್ತದೆ. ಇಲ್ಲದಿದ್ದರೆ ಮಗಲಲ್ಲಿ ಇರತಕ್ಕ ಮನೆಯರು ಆಶ್ರಯ ಪಡಬೇಕಾಗುತ್ತದೆ, ಇದು ಪ್ರಯಾಣಿಕರಿಗೆ ಬಹಳ ತೊಂದರೆದಾಯಕವಾದ ಕೆಲಸ ಒಂದು ಬಸ್ ಶೆಲ್ಟರ್ ಕಟ್ಟಲಿಕ್ಕೆ ಕೇವಲ ೨೫ ಅಥವಾ ೩೦ ಸಾವಿರ ಬೇಕಾಗುತ್ತದೆ ಆದ್ದರಿಂದ ಸರ್ಕಾರದ ಬಸ್ ಸೌಕರ್ಯವಿರುವ ಪ್ರತಿಯೊಂದು ಹಳ್ಳಿಗೆ ಬಸ್ ಶೆಲ್ಟರ್ ಕಟ್ಟಿಸುವ ವ್ಯವಸ್ಥೆಯನ್ನು ಮಾಡಬೇಕು. ಅಲ್ಲದೆ ಇತ್ತೀಚೆಗೆ ಬಸ್ ಪ್ರಯಾಣದ ಕಾಲಕ್ಕೆ ೧೦ ಪೈಸೆ ೨೦ ಪೈಸೆ ಚಿಲ್ಲರೆಯನ್ನೂ ಕಾರ್ಯನಿರ್ವಾಹಕರು ಕೊಡುವುದೇ ಇಲ್ಲ. ಬಡಜನರಿಗೆ ಇದೇ ಬಹಳ